ಶ್ರೀಮತಿ ಮುಕ್ತರುನ್ನೀಸ... ಇದರ ಬಗ್ಗೆ ಎಷ್ಟಸಾರಿ ಫೈನಲೈಸ್ ಮಾಡಿದ್ದಾರೆ ಎಂಬುದನ್ನು ಹೇಳಬೇಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ. ಮಾನ್ಯ ಸದಸ್ಯರು ಸ್ಪಷ್ಟವಾಗಿ ''ಡಿ'' ಪ್ರಶ್ನೆಯಲ್ಲಿ ''ದುರುಪಯೋಗಪಡಿಸಿಕೊಂಡಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ'' ಎಂದು ಪ್ರಸ್ತಾಪ ಮಾಡಿದ್ದಾರೆ.....

ಅಧ್ಯಕ್ಷರು.—ಇದರ ಬಗ್ಗೆ ಮಾನ್ಯ ಸದಸ್ಯರೂ ಕೂಡ ೨ ಸಾರಿ ಪ್ರಶ್ನೆಗಳನ್ನು ಕೇಳಿದ್ದಾರೆ, ನಂತರ ಮಾನ್ಯ ಖಿರ್ನಿಯವರೂ ಕೂಡ ಪ್ರಶ್ನೆಯನ್ನು ಕೇಳಿದ್ದಾರೆ. ಇದಕ್ಕೆ ಮಾನ್ಯ ಸಚಿವರೂ ಕೂಡ ಸ್ಪಷ್ಟವಾದ ಉತ್ತರವನ್ನು ಕೊಟ್ಟಿದ್ದಾರೆ. ನಾನು ಇನ್ನೂ ಎಷ್ಟುಸಾರಿ ಇವರಿಗೆ ಅವಕಾಶವನ್ನು ಕೊಡಬೇಕು ?

ಶ್ರೀ ಆರ್. ವಿ. ದೇಶಪಾಂಡೆ.—ನಾನು ಕೊಟ್ಟ ಉತ್ತರದಿಂದ ಮಾನ್ಯ ಸದಸ್ಯರಿಗೆ ಸ್ಯಾಟಿಸ್‌ಫೈ ಆಗದಿದ್ದರೆ ವರ್ಕ್ಸ್ ಬಗ್ಗೆಯಾಗಲಿ, ಕಾಂಟ್ರ್ಯಾಕ್ಟ್ ಬಗ್ಗೆಯಾಗಲಿ, ಪರ್ಚೇಸ್ ಬಗ್ಗೆಯಾಗಲಿ ದೂರುಗಳು ನಿರ್ದಿಷ್ಟವಾಗಿದ್ದರೆ ಅಂಥಾದ್ದನ್ನು ಕೊಡಲಿ, ಅದಕ್ಕೆ ಉತ್ತರವನ್ನು ಕೊಡುತ್ತೇನೆ.

ಶ್ರೀಮತಿ ಮುಕ್ತರುನ್ನೀಸಾ.—ಎಷ್ಟು ಕೆಲಸವನ್ನು ಫೈನಲೈಸ್ ಮಾಡಿದ್ದೀರಿ ? ಯಾವ ಯಾವ ಕಂಪೆನಿಗಳಿಂದ ಸ್ಟೀಲ್‌ನ್ನು ಪರ್ಚೇಸ್ ಮಾಡಿದ್ದೀರಿ ? ಯಾವ ಯಾವ ಕಂಪನಿಗಳಿಂದ ಸಿಮೆಂಟ್‌ನ್ನು ಪರ್ಚೇಸ್ ಮಾಡಿದ್ದೀರಿ ? ಈ ರೀತಿ ಪರ್ಚೇಸ್ ಮಾಡುವುದಕ್ಕೆ ಮುಂಚೆ ಪರ್ಚೇಸ್ ಕಮಿಟಿ ಮತ್ತು ಫೈನಾನ್ಸ್ ಕಮಿಟಿಯ ಅಪ್ರೂವಲ್‌ನ್ನು ತೆಗೆದುಕೊಂಡಿದೆಯೆ ? ಪೇಸ್ ವರ್ಕ್‌ನ್ನು ಯಾರು ಯಾರಿಗೆ ಕೊಟ್ಟಿದ್ದೀರಿ ? ಅವರ ಹೆಸರುಗಳೇನು ?...

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ. ಈ ಕಾಮಗಾರಿಯನ್ನು ಕೊಟ್ಟಿರುವುದರಲ್ಲಿ ದುರ್ವ್ಯವಹಾರ ನಡೆದಿದೆ ಎಂದು ಮಾನ್ಯ ಸದಸ್ಯರು ಆರೋಪ ಮಾಡಿದ್ದಾರೆ. ಆದರೆ ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾ ಯಾವು ಯಾವುದರಲ್ಲಿ ದುರ್ವ್ಯವಹಾರವಾಗಿದೆ ಎಂಬುದನ್ನು ಸ್ಪೆಸಿಫಿಕ್ ಆಗಿ ನನ್ನ ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುತ್ತಿದ್ದಾರೆ. ಇದರಲ್ಲಿ ಒಂದಲ್ಲ, ಎರಡಲ್ಲ, ಇರತಕ್ಕದ್ದು. ಬಹಳಷ್ಟು ದೂರುಗಳಿವೆ. ಅದನ್ನೆಲ್ಲಾ ಹೇಳುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಈ ಎಲ್ಲ ವಿವರಗಳನ್ನೂ ಹೇಳಬೇಕಾದರೆ ಇದರ ಬಗ್ಗೆ ಅರ್ಧ ಗಂಟೆ ಕಾಲದ ಚರ್ಚೆಗೆ ಅವಕಾಶವನ್ನು ತಾವು ಕೂಡಬೇಕು, ಇಲ್ಲದಿದ್ದರೆ ನೇರವಾಗಿ ಈ ದುರ್ವ್ಯವಹಾರದ ಬಗ್ಗೆ ತನಿಖೆಯನ್ನು ನಡೆಸುವುದಕ್ಕೆ ಆರ್ಡರ್ ಮಾಡಬೇಕು.

ಅಧ್ಯಕ್ಷರು.—ಇದನ್ನು ಅರ್ಧಗಂಟೆ ಚರ್ಚೆಯಾಗಿ ತೆಗೆದುಕೊಳ್ಳೋಣ. ಈಗ ಮಾನ್ಯ ದೇಶಪಾಂಡೆಯವರೇ ಶ್ರೀಮತಿ ಚೌಗಲೆಯವರ ಪ್ರಶ್ನೆಗೆ ಉತ್ತರವನ್ನು ಕೊಡಿ.

ಶ್ರೀ ಆರ್. ವಿ. ದೇಶಪಾಂಡೆ.—ಉತ್ತರವನ್ನು ಮೊದಲೇ ಕೊಟ್ಟಿದ್ದೇನೆ.

ಚಿಕ್ಕೋಡಿ ಹುಡ್ಕೋ ಮನೆಗಳು.

೭೧೭ ಶ್ರೀಮತಿ ಶಕುಂತಲಾ ಟಿ ಚೌಗಲೆ (ಚಿಕ್ಕೋಡಿ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕೋಡಿಯಲ್ಲಿ ಹುಡ್ಕೋ ಮನೆಗಳ ಯೋಜನೆಯಲ್ಲಿ ಕೈಗೆತ್ತಿಕೊಂಡು ಈಗಾಗಲೇ ೮-೧೦ ವರ್ಷಗಳು ಸಂದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಕಟ್ಟಡಗಳ ಕೆಲಸವನ್ನು ಪೂರ್ಣಗೊಳಿಸಲು ಜನರು ಕಷ್ಟಪಟ್ಟು ಸ್ವಂತ ಮನೆಯೊಂದನ್ನು ಪಡೆಯಲು ಹಣ ನೀಡಿದರೂ ಕೂಡ ಇದುವರೆಗೂ ಮನೆಗಳನ್ನು ಬಿಡುಗಡೆ ಮಾಡಿಲ್ಲದಿರುವುದಕ್ಕೆ ಕಾರಣಗಳೇನು ?

ಇ) ಹಾಗಿದ್ದಲ್ಲಿ ನಾಗರೀಕರಿಗೆ ಮನೆಗಳನ್ನು ಒಂದು ನಿಶ್ಚಿತ ದಿನದಂದು ಕೊಡುತ್ತೇವೆ ಎಂದು ಆಶ್ವಾಸನೆ ನೀಡಲಾಗುವುದೆ ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಗೃಹ ನಿರ್ಮಾಣ ಕೆಲಸವನ್ನು ಗುತ್ತಿಗೆದಾರರಿಗೆ ವಹಿಸಿಕೊಟ್ಟು ೬೪ ವರ್ಷಗಳು ಸಂದಿವೆ.

ಆ) ಕಟ್ಟಡದ ಕೆಲಸಗಳು ಪೂರ್ಣಗೊಂಡಿವೆ. ಹಾಗೂ ವಿದ್ಯುತ್ ಸರಬರಾಜು ಕೆಲಸಗಳೂ ಪೂರ್ಣಗೊಂಡಿವೆ. ೧೯೮೬ ಏಪ್ರಿಲ್ ತಿಂಗಳಲ್ಲಿ ಒಳಚರಂಡಿ ವ್ಯವಸ್ಥೆ ಹಾಗೂ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ವಹಿಸಿದ್ದು; ಈ ಎರಡೂ ಕೆಲಸಗಳು ಇನ್ನೂ ಸಾಗುತ್ತಿದ್ದು, ಪೂರ್ಣಗೊಂಡಿಲ್ಲದ ಕಾರಣ, ಮನೆಗಳನ್ನು ಹಂಚಿಕೆದಾರರ ವಶಕ್ಕೆ ನೀಡಿಲ್ಲ.

ಇ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಕಾಲೋನಿಯ ಒಳಚರಂಡಿ ವ್ಯವಸ್ಥೆ ಮತ್ತು ನೀರು ಸರಬರಾಜು ಕೆಲಸವನ್ನು ಪೂರ್ಣಗೊಳಿಸಿದ ನಂತರ ಮನೆಗಳನ್ನು ಹಂಚಿಕೆದಾರರ ವಶಕ್ಕೆ ನೀಡಲಾಗುವುದು.

ಶ್ರೀಮತಿ ಶಕುಂತಲಾ ಟಿ ಚೌಗಲೆ.—ಮಾನ್ಯ ಅಧ್ಯಕ್ಷರೇ ೧೯೮೬ ಏಪ್ರಿಲ್‌ವರೆಗೆ ಮೂರೂ ವರ್ಷಗಳಾದರೂ ಒಳಚರಂಡಿ ವ್ಯವಸ್ಥೆ ಮತ್ತು ನೀರು ಸರಬರಾಜು ವ್ಯವಸ್ಥೆಯನ್ನು ಮಂಡಲಿಯವರಿಗೆ ಏತಕ್ಕೆ ಪೂರ್ತಿ ಮಾಡಲಿಲ್ಲವೆಂದು ಕೇಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ಕೆಲಸದಲ್ಲಿ ಸ್ವಲ್ಪ ಡಿಲೆಯಾಗಿರುವುದನ್ನು ಒಪ್ಪಿಕೊಂಡಿದ್ದೇನೆ. ಸಾಕಷ್ಟು ಡಿಲೆಯಾಗಿದೆ. ಈಗಾಗಲೇ ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇನೆ. ಏಪ್ರಿಲ್ ೩೦ನೇ ತಾರೀಖಿನೊಳಗೆ ನೀರು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಮುಗಿಸಬೇಕೆಂದು ಹೇಳಿದ್ದೇನೆ.

ಶ್ರೀಮತಿ ಶಂಕುತಲಾ ಟಿ. ಚೌಗಲೆ.—ಜನರಿಗೆ ಯಾವುದಾದರೂ ನಿಶ್ಚಿತವಾದ ತಿಂಗಳು ಅಥವಾ ವರ್ಷ ಹೇಳಿದರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಇಷ್ಟೇ ತಿಂಗಳು ಎಂದು ಹೇಳುವುದಕ್ಕಾಗುವುದಿಲ್ಲ. ಮೇ ಒಳಗೆ ಮಾಡಿ ಮುಗಿಸುವ ವ್ಯವಸ್ಥೆಯನ್ನು ಮಾಡುತ್ತೇವೆ.

ಬಿ. ಡಿ. ಎ. ದಲ್ಲಿ ಎರವಲು ಸೇವೆಗೆ ಬಂದ ಅಧಿಕಾರಿಗಳು.

೫೭೭. ಶ್ರೀ ಗೋಪಾಲ್ ಎಂ. ಕಾನಡೆ (ಸಿಸಿ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿ. ಡಿ. ಎ. ದಲ್ಲಿ ಕೆಲಸ ಮಾಡುವ ನೌಕರರ ಸಂಖ್ಯೆ ಎಷ್ಟು ಇವರಲ್ಲಿ ಎಷ್ಟು ಜನ ನೌಕರರು ಎರವಲು ಸೇವೆ ಮೇರೆಗೆ ಬಂದಿದ್ದಾರೆ. ಹಾಗೂ ಎಷ್ಟು ವರ್ಷಗಳಿಂದ ಬಿಡಿಎ ದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ?

ಆ) ಇವರಲ್ಲಿ ಹರಿಜನ ನೌಕರರ ಸಂಖ್ಯೆ ಎಷ್ಟು ? ಹಾಗೂ ಎಷ್ಟು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಒಟ್ಟು ನೌಕರರು ೧೨೬೩ ಎರವಲು ಸೇವೆಯ ಮೇಲೆ ೩೧೧, ೩ ತಿಂಗಳಿಂದ ೫ ವರ್ಷದ ವರೆವಿಗೆ.

ಆ) ೩೧೧ ಎರವಲು ಸೇವೆಯವರ ಪೈಕಿ ೩೩ ಅಧಿಕಾರಿಗಳು/ನೌಕರರು ಪರಿಶಿಷ್ಟ ಜಾತಿಗೆ ಸೇರಿದವರು. ೩ ತಿಂಗಳಿಂದ ೫ ವರ್ಷದವರೆಗೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೇ, ಎರವಲು ಸೇವೆ ಮೇಲೆ ಬಂದವರು ೩೧೧ ಜನ ಎಂದು ಹೇಳಿದ್ದೀರಿ. ಇದರಲ್ಲಿ ಪರಿಶಿಷ್ಟ ಜಾತಿಯವರು ೩೩ ಜನ ಅಧಿಕಾರಿಗಳು ಎಂದು ಹೇಳಿದ್ದೀರಿ. ಅದರೊಳಗೆ ಇಂಜಿನಿಯರ್ ಮೆಂಬರ್ಸ್ ಯಾರು ಯಾರು ಇದ್ದಾರೆ. ಆ ಮೇಲೆ ಇಂಜಿನೀಯರ್ಸ್ ಆಫೀಸರ್ಸ್ ಯಾರು ಯಾರು ಇದ್ದಾರೆ. ಎಕ್ಸಿಕ್ಯೂಟೀವ್ ಇಂಜಿನಿಯರ್ಸ್ ಎಷ್ಟು ಮಂದಿ ಪೆಡ್ಯೂಲ್‌ಕ್ಯಾಸ್ಟ್‌ನವರು ಇದ್ದಾರೆ. ಎಷ್ಟು ಮಂದಿ ಜೂನಿಯರ್ ಇಂಜಿನೀಯರ್ಸ್ ಇದ್ದಾರೆ. ಸ್ಪೆಷಲ್ ಡಿ. ಸಿ. ಎಷ್ಟು ಮಂದಿ ಇದ್ದಾರೆ. ಕೆ. ಎ. ಎಸ್, ಎಷ್ಟು ಮಂದಿ ಇದ್ದಾರೆ. ಟೋಟಲ್ ಆವರ ಹೆಸರು ಆವರ ಹುದ್ದೆಯನ್ನು ಕೊಟ್ಟರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಈಗ ಯಾವ ಯಾವ ಡಿಪಾರ್ಟ್‌ಮೆಂಟಿನಿಂದ ಎಷ್ಟೆಷ್ಟು ಮಂದಿ ಬಂದಿದ್ದಾರೆಂಬುದನ್ನು ಹೇಳುವುದಾದರೆ ಡಿ. ಪಿ. ಎ. ಆರ್. ನಿಂದ ೧೦ ಜನ ರೆವಿನ್ಯೂ ಡಿಪಾರ್ಟ್‌ಮೆಂಟ್ ನಿಂದ ೮ ಆರ್ಟಿಕಲ್ಟರ್ ನಿಂದ–೧ ಇನ್‌ಫರ್‌ಮೇಷನ್ ಅಂಡ್ ಬ್ರಾಡ್‌ಕಾಸ್ಟಿಂಗ್ ನಿಂದ–೧